# ಅನ್‌ಲಾಕ್ ರೇಚಲ್!



**ಮಲಯಾಳಂ, ತಮಿಳು ಭಾಷೆಗಳ ಸಿನಿಮಾಗಳಲ್ಲಿ ಈಗಾಗಲೇ ನಟಿಸಿರುವ ಬೆಂಗಳೂರಿನ ಹುಡುಗಿ ರೇಚಲ್ ಡೇವಿಡ್ ಅವರಿಗೆ ಈಗ ಕನ್ನಡದಲ್ಲಿಯೂ ಅವಕಾಶಗಳು ಅರಸಿ ಬರುತ್ತಿವೆ. ದೀಪಕ್ ಮಧುವನಹಳ್ಳಿ ನಿರ್ದೇಶನದ 'ಅನ್‌ಲಾಕ್ ರಾಘವ' ಸಿನಿಮಾದಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ.**

ರೇಚಲ್ ಡೇವಿಡ್! ಈ ಹೆಸರು ಗಾಂಧಿನಗರಕ್ಕೆ ಹೊಸತು. 'ಲವ್ ಮಾಕ್ಟೇಲ್ 2' ಸಿನಿಮಾ ನೋಡಿದವರಿಗೆ ಈ ಹುಡುಗಿಯ ಮುದ್ದು ಮುಖ ನೆನಪಿರುತ್ತದೆ. ಮೊದಲ ಸಿನಿಮಾದಲ್ಲಿಯೇ ನೋಟದಿಂದ, ನಟನೆಯಿಂದ ಮನಸಲ್ಲಿ ಉಳಿದುಕೊಳ್ಳುವ ಹಾಗೆ ಕಾಣಿಸಿಕೊಂಡ ಈ ಜಾಣೆ ಈಗ ಮತ್ತಷ್ಟು ಹೊಸ ಚಿತ್ರ, ಪಾತ್ರಗಳೊಂದಿಗೆ ತೆರೆಯ ಮೇಲೆ ಮೆರೆಯಲು ಸಜ್ಜಾಗುತ್ತಿದ್ದಾರೆ.

ರೇಚಲ್ ಮಾತೃಭಾಷೆ ಮಲಯಾಳಂ. ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಹಾಗಾಗಿ ಮಾತಿನಲ್ಲಿ ಅವರು ಕನ್ನಡತಿಯೇ. ಓದಿದ್ದು ಬ್ಯುಸಿನೆಸ್ ಮ್ಯಾನೇಜ್ಮೆಂಟ್. ಆದರೆ ಹತ್ತರಿಂದ ಐದರವರೆಗೆ ದುಡಿಯುವ ಕಾರ್ಪೊರೇಟ್ ಜಗತ್ತು ತನಗೆ ಒಗ್ಗುವುದಿಲ್ಲ ಎಂದು ಅವರಿಗೆ ಇಂಟರ್ನ್‌ಷಿಪ್ ಮಾಡುವಾಗಲೇ ಗೊತ್ತಾಗಿಬಿಟ್ಟಿತ್ತು. ಅಷ್ಟರಲ್ಲಾಗಲೇ ಬಣ್ಣದ ಲೋಕದ ಮೋಹನ ಮುರಳಿ ಅವರನ್ನು ಕರೆಯಲು ಶುರುಮಾಡಿತ್ತು.

ನಟನೆ ಎನ್ನುವುದು ರೇಚಲ್ ಅವರ ಬಾಲ್ಯದ ಕನಸೇನಲ್ಲ. ಹಾಗೆ ನೋಡಿದರೆ ಅವರಿಗೆ ಆಸಕ್ತಿ ಇದ್ದಿದ್ದು ಕ್ರೀಡೆಗಳಲ್ಲಿ. ಶಾಲಾ ದಿನಗಳಲ್ಲಿ ಹೆಚ್ಚಾಗಿ ಭಾವಹಿಸುತ್ತಿದ್ದದ್ದೂ ಕ್ರೀಡೆಗಳಲ್ಲಿಯೇ. ಆದರೆ ಹದಿನಾರನೇ ವಯಸ್ಸಿನಲ್ಲಿ ಭಾಗವಹಿಸಿದ ಒಂದು ಸೌಂದರ್ಯ ಸ್ಪರ್ಧೆ ಅವರಲ್ಲಿ ಬಣ್ಣದ ಲೋಕದ ಕನಸುಗಳನ್ನು ಬಿತ್ತಿತು. ಆ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿದ್ದೂ ವಿಶ್ವಾಸವನ್ನು ಹೆಚ್ಚಿಸಿತು. ಅಲ್ಲಿಂದ ಮುಂದೆ ಸಮಯ ಸಿಕ್ಕಾಗಲೆಲ್ಲ ಮಾಡೆಲಿಂಗ್‌ನಲ್ಲಿಯೂ ತೊಡಗಿಕೊಂಡರು.

ಪದವಿ ಮುಗಿಯುವಷ್ಟರಲ್ಲಿ ತನ್ನ ಅಭಿರುಚಿಗೆ, ಅಭಿವ್ಯಕ್ತಿಗೆ ಒದಗಿಬರುವುದು ನಟನೆ ಮಾತ್ರ ಎಂಬುದು ಅವರಿಗೆ ಸ್ಪಷ್ಟವಾಗಿತ್ತು. ಹಾಗಾಗಿಯೇ ಮುಂಬೈಗೆ ಹೋಗಿ ಅಲ್ಲಿನ ಪ್ರತಿಷ್ಠಿತ ಅನುಪಮ್ ಖೇರ್ ನಟನಾಶಾಲೆಯಲ್ಲಿ ನಟನೆಯ ತರಬೇತಿಯನ್ನೂ ಪಡೆದುಬಂದರು. ಮುಂಬೈನಿಂದ ಬಂದ ರೇಚಲ್ ಕನ್ನಡ ಚಿತ್ರರಂಗದಲ್ಲಿ ಅಭಿನಯದ ಅವಕಾಶಕ್ಕಾಗಿ ಎದುರುನೋಡುತ್ತಿದ್ದರು. ಅವರ ನಿರೀಕ್ಷೆಗೆ ತಕ್ಕ ಹಾಗೆ ಒಂದು ದೊಡ್ಡ ನಿರ್ಮಾಣ ಸಂಸ್ಥೆಯಡಿಯಲ್ಲಿ ದೊಡ್ಡ ಬಜೆಟ್‌ನ ಸಿನಿಮಾವೊಂದರಲ್ಲಿ ನಾಯಕಿಯಾಗಿ ನಟಿಸುವ ಅವಕಾಶವೂ ಸಿಕ್ಕಿತ್ತು. ಆದರೆ ದುರದೃಷ್ಟಕ್ಕೆ ಆ ಸಿನಿಮಾ ಶುರುವಾಗಲೇ ಇಲ್ಲ. ಆ ನಿರಾಸೆಯಲ್ಲಿದ್ದಾಗಲೇ ರೇಚಲ್‌ಗೆ ಮಲಯಾಳಂ ಸಿನಿಮಾರಂಗ ಅವಕಾಶದ